KAKL500024972022

# ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್

ಉಪಸ್ಥಿತರು :-**ಶ್ರೀ ರಹೀಂ ಅಲಿ ಎಂ ನಧಾಫ್. ಬಿ.ಎ.ಎಲ್. ಎಲ್.ಎಲ್.ಬಿ**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಕೆಜಿಎಫ್.**

**ದಿನಾಂಕಃ 19ನೇ ಏಪ್ರಿಲ್ 2025**

**ಕ್ರಿಮಿನಲ್ ಪ್ರಕರಣ ಸಂಖ್ಯೆ 1193ಃ2022**

**ಫಿರ್ಯಾದುದಾರರು :-** ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವವರು
ಪೋಲೀಸ್ ಉಪನಿರೀಕ್ಷಕರು,
ಬೇತಮಂಗಲ ಪೋಲೀಸ್ ಠಾಣೆ,
ಬೇತಮಂಗಲ.
**(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

-ವಿರುದ್ಧ-

**ಆರೋಪಿತರುಃ-** 1 ಶ್ರೀ ಪ್ರಶಾಂತ್ ಕುಮಾರ್
ಬಿನ್ ರಾಮಚಂದ್ರಪ್ಪ, 28 ವರ್ಷ,

2 ಶ್ರೀ ಲಕ್ಷ್ಮೀಪತಿ ಬಿನ್ ಚೆನ್ನಪ್ಪ, 31 ವರ್ಷ,
ಇಬ್ಬರ ವಾಸಃ ಗಂಧಾರಮಾಕನಪಲ್ಲಿ ಗ್ರಾಮ,
ವಿ.ಕೋಟೆ ಮಂಡಲ್, ಪಲಮನೇರು ತಾಲ್ಲೂಕು,
ಚಿತ್ತೂರು ಜಿಲ್ಲೆ.
(ಪರ ಶ್ರೀ ಕೆ.ಸಿ.ಎನ್. ವಕೀಲರು)

**: ತೀರ್ಪು :**

ಬೇತಮಂಗಲ ಆರಕ್ಷಕ ಉಪನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡತೆ ಇರುತ್ತದೆ.

ದಿನಾಂಕ 18-07-2022 ರಂದು ಸಂಜೆ 7-30 ಗಂಟೆ ಸಮಯದಲ್ಲಿ ಬೇತಮಂಗಲ ಪೋಲೀಸ್ ಠಾಣಾ ಸರಹದ್ದಿನಲ್ಲಿರುವ ಪಂಥಮನಹಳ್ಳಿ ಗ್ರಾಮದ ಬಳಿ ಇರುವ ಶ್ರೀ ಸಾಯಿ ಫ್ಯೂಯಲ್ ಪೆಟ್ರೋಲ್ ಬಂಕ್ ನಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಸದರಿ ದಿನದಂದು ಮದ್ಯಾಹ್ನ ಪೆಟ್ರೋಲ್ ಹಾಕುವ ವಿಚಾರವಾಗಿ ಚಾಸಾ-1 ಮತ್ತು 2 ರವರ ಜೊತೆ ಜಗಳ ತೆಗೆದು ಕೈಗಳಿಂದ ಹೊಡೆದು ಕಾಲುಗಳಿಂದ ಒದ್ದು ಸಮಾನ್ಯ ಸ್ವರೂಪದ ಗಾಯಾಗಳನ್ನು ಮಾಡಿದ್ದು ಮತ್ತು 2 ನೇ ಆರೋಪಿತನು ಚಾಸಾ-2 ರವರಿಗೆ ಪೆಟ್ರೋಲ್ ಗನ್ನಿಂದ ಹಣೆಗೆ ಹೊಡೆದು ಅದೇ ರೀತಿ 1 ನೇ ಆರೋಪಿತನು ಸ್ಟೀಲ್ ಬಕೇಟ್ ನಿಂದ ಚಾಸಾ-1 ರವರ ಎಡಗೈ ಮೇಲೆ ಮತ್ತು ಎಡ ಕಿವಿ ಬಳಿ ಹೊಡೆದು ರಕ್ತ ಗಾಯಗಳನ್ನು ಮಾಡಿರುತ್ತಾರೆಂದು ಹಾಗೂ ಎಮರಾ ಮದ್ಯಾನಮು ಮಾಟಲಾಡಿಂದಿ ಇಪ್ಪಡು ರಾಂಡರಾ ಲೋಪರ್ ನಾ ಕೊಡಕಲಾ ಎಂದು ಅವಾಚ್ಯ ಶಬ್ದಗಳಿಂದ ಬೈದು ತಮ್ಮ ತಂಟೆಗೆ ಬಂದರೆ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ತನಿಖೆಯ ಮೂಲಕ ಸಾಬೀತಾಗಿರುವುದಾಗಿ ಬೇತಮಂಗಲ ಪೋಲೀಸರು ಆರೋಪಿತರ ವಿರುದ್ಧ ದೋಷಾರೋಪಣೆಯ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿತರು ವಕೀಲರ ಮುಖಾಂತರ ಜಾಮೀನು ಅರ್ಜಿಯನ್ನು ಸಲ್ಲಿಸಿ ಈ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಭಾರತೀಯ ದಂಢ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34 ರ ಆರೋಪಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಂಡಿದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ. ದೋಷರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಆದರೆ ಆರೋಪಿತರು ದೋಷರೋಪಣೆ ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು

ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡುಬರದ ಕಾರಣ ದೋಷರೋಪಣೆಯನ್ನು ರಚಿಸಲಾಯಿತು.

5. ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹವಾಚಕ ಕಲಂ 34 ರ ಅರೋಪಗಳಿಗೆ ದೋಷರೋಪಣೆಯನ್ನು ರಚಿಸಿ, ಓದಿ, ಆರೋಪಿತರಿಗೆ ತಿಳಿಯುವ ಬಾಷೆಯಲ್ಲಿ ವಿವರಿಸಿ ಹೇಳಿದ್ದು ಆರೋಪಿತರು ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

6. ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಇಬ್ಬರು ಸಾಕ್ಷಿದಾರರನ್ನು ಫ್ರಾಸಾ 1 ಮತ್ತು 2 ಎಂದು ವಿಚಾರಣೆಗೆ ಒಳಪಡಿಸಿ, ನಿಪಿ-1 ರಿಂದ 4 ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ. ಅಭಿಯೋಜನೆಯ ಪ್ರಕರಣದ ಪಿರ್ಯಾದಿದಾರರು, ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾದ ಫ್ರಾಸಾ-1 ಮತ್ತು 2 ರವರು ಸಾಕ್ಷ್ಯದಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷ್ಯ ನೀಡದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವುದಿಲ್ಲವೆಂದು ಕಂಡು ಬಂದ ಕಾರಣ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿರುತ್ತದೆ.

7. ಅಭಿಯೋಜನೆಯ ಪ್ರಮುಖ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯವನ್ನು ನೀಡಿದಿರುವುದರಿಂದ ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರನ್ನು ಪ್ರಶ್ನಿಸಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ.

8. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

## ಅಂಶಗಳು

ಅಂಶ ಸಂಖ್ಯೆ-1 ದಿನಾಂಕ 18-07-2022 ರಂದು ಸಂಜೆ 7-30 ಗಂಟೆ ಸಮಯದಲ್ಲಿ ಬೇತಮಂಗಲ ಪೋಲೀಸ್ ಠಾಣಾ ಸರಹದ್ದಿನಲ್ಲಿರುವ ಪಂಥಮನಹಳ್ಳಿ ಗ್ರಾಮದ ಬಳಿ ಇರುವ ಶ್ರೀ ಸಾಯಿ ಫ್ಯೂಯಲ್ ಪೆಟ್ರೋಲ್ ಬಂಕ್ ನಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಸದರಿ ದಿನದಂದು ಮದ್ಯಾಹ್ನ ಪೆಟ್ರೋಲ್ ಹಾಕುವ ವಿಚಾರವಾಗಿ ಚಾಸಾ-1 ಮತ್ತು 2 ರವರ ಜೊತೆ ಜಗಳ ತೆಗೆದು ಎಮರಾ ಮದ್ಯಾನಮು ಮಾಟಲಾಡಿಂದಿ ಇಪ್ಪಡು ರಾಂಡರಾ ಲೋಫರ್ ನಾ ಕೊಡಕಲಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಅಭಿಯೋಜನೆ ಪಕ್ಷದವರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಆರೋಪಿತರು ಆರೋಪಗಳನ್ನು ಎಸಗಿದ್ದಾರೆಂದು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವವರೇ?

ಅಂಶ ಸಂಖ್ಯೆ-2 ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಪೆಟ್ರೋಲ್ ಹಾಕುವ ವಿಚಾರವಾಗಿ ಚಾಸಾ-1 ಮತ್ತು 2 ರವರ ಜೊತೆ ಜಗಳ ತೆಗೆದು ಕೈಗಳಿಂದ ಹೊಡೆದು ಕಾಲುಗಳಿಂದ ಒದ್ದು ಸಮಾನ್ಯ ಸ್ವರೂಪದ ಗಾಯಾಗಳನ್ನು ಮಾಡಿರುತ್ತಾರೆಂದು ಅಭಿಯೋಜನೆ ಪಕ್ಷದವರು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಆರೋಪಿತರು ಆರೋಪಗಳನ್ನು ಎಸಗಿದ್ದಾರೆಂದು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವವರೇ?

ಅಂಶ ಸಂಖ್ಯೆ-3 ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಸದರಿ ವಿಷಯವಾಗಿ 2 ನೇ ಆರೋಪಿತನು ಚಾಸಾ-2 ರವರಿಗೆ ಪೆಟ್ರೋಲ್ ಗನ್ನಿಂದ ಹಣೆಗೆ ಹೊಡೆದು ಹೊಡೆದಿದ್ದು ಅದೇ ರೀತಿ 1 ನೇ ಆರೋಪಿತನು ನೀವು ಸ್ಟೀಲ್ ಬಕೇಟ್ ನಿಂದ ಚಾಸಾ-1 ರವರ ಎಡಗೈ ಮೇಲೆ ಮತ್ತು ಎಡ ಕಿವಿ ಬಳಿ ಹೊಡೆದು ರಕ್ತ ಗಾಯಗಳನ್ನು ಮಾಡಿರುತ್ತಾರೆಂದು ಅಭಿಯೋಜನೆ ಪಕ್ಷದವರು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಆರೋಪಿತರು ಆರೋಪಗಳನ್ನು ಎಸಗಿದ್ದಾರೆಂದು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವವರೇ?

ಅಂಶ ಸಂಖ್ಯೆ-4 ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಸದರಿ ವಿಚಾರವಾಗಿ ಚಾಸಾ-1 ರಿಂದ 4 ರವರ ಜೊತೆ ಜಗಳ ತೆಗೆದು ತಮ್ಮ ತಂಟೆಗೆ ಬಂದರೆ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಅಭಿಯೋಜನೆ ಪಕ್ಷದವರು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಆರೋಪಿತರು ಆರೋಪಗಳನ್ನು ಎಸಗಿದ್ದಾರೆಂದು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವವರೇ?

<u>ಅಂಶ ಸಂಖ್ಯೆ-5</u> - ಏನು ಆದೇಶ?

10. ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಈ ನ್ಯಾಯಾಲಯವು ಉತ್ತರಿಸಿದೆ.

ಅಂಶ ಸಂಖ್ಯೆ ಃ 1 ರಿಂದ 4 ಃ ನಕಾರಾತ್ಮಕವಾಗಿ

ಅಂಶ ಸಂಖ್ಯೆ ಃ5 ಃ ಅಂತಿಮ ಆದೇಶದಂತೆ ಈ ಕೆಳಕಂಡ

ಕಾರಣಗಳಿಗಾಗಿ,

<u>ಕಾರಣಗಳು</u>

11. <u>ಅಂಶ ಸಂಖ್ಯೆ ಃ</u> 1 ರಿಂದ 4 ಃ- ಈ ಮೇಲ್ಕಂಡ 1 ರಿಂದ 4 ನೇ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಒಂದು ಅಂಶದ ಮೇಲಿನ ಚರ್ಚೆಯು ಮತ್ತೆ ಇನ್ನೊಂದು ಅಂಶಗಳಲ್ಲಿನ ಚರ್ಚೆಯಲ್ಲಿ ಪೂನರಾವರ್ತೆಯಾಗುವ ಕಾರಣಕ್ಕಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

12. ಈ ಪ್ರಕರಣದಲ್ಲಿ ಆರೋಪಿತರ ವಿರುದ್ದ ಮಾಡಲಾದ ಆಪಾದನೆಗಳನ್ನು ರುಜುವಾತುಪಡಿಸುವ ಸಂಪೂರ್ಣ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲಿದ್ದು ಅದಕ್ಕಾಗಿ ಅಭಿಯೋಜನೆಯವರು ಸಾಕಷ್ಟು ನಂಬಲಾರ್ಹವಾದ ಸಾಕ್ಷ್ಯ ಪುರಾವೆಗಳನ್ನು ಪೂರೈಸುವ ಹೊಣೆಗಾರಿಕೆಯು ಹಾಗೂ ಆರೋಪಿತರ ಆರೋಪಗಳನ್ನು ನಿಸ್ಸಂಶಯವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲೆ ಇರುತ್ತದೆ.

13. ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷಿಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿದಾಗ ಅಭಿಯೋಜನೆಯ ಪಿರ್ಯಾದಿ, ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾದ ಫ್ರಾಸಾ-1 ಮತ್ತು 2 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರ ಮತ್ತು ತಮ್ಮ ನಡುವೆ ಯಾವುದೇ ಗಲಾಟೆ ಆಗಿಲ್ಲ, ಕೈಗಳಿಂದ ಮತ್ತು ಯಾವುದೇ ವಸ್ತುಗಳಿಂದ ಹೊಡೆದಿಲ್ಲ, ತಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ, ಯಾವುದೇ ದೂರು ನೀಡಿಲ್ಲ, ಪೋಲೀಸರು ತಮ್ಮನ್ನು ವಿಚಾರಣೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣಬೆದರಿಕೆ ಹಾಕಿಲ್ಲ

ಮತ್ತು ತಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಆರೋಪಿತರೊಡನೆ ರಾಜೀ ಮಾಡಿಕೊಂಡಿರುತ್ತವೆಂದು ಅಭಿಯೋಜನೆಯ ಪ್ರಕರಣದ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿದ್ದು ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸಾವಾಲು ಮಾಡಿದಾಗಲು ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವಂತಹ ಯಾವುದೇ ಸಾಕ್ಷವನ್ನು ನುಡಿದಿರುವುದಿಲ್ಲ. ಈ ಪ್ರಕರಣದ  ಪಿರ್ಯಾದಿ, ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಸಾಕ್ಷದಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ದವಾಗಿ ಸಾಕ್ಷ ನೀಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವುದಿಲ್ಲವೆಂದು ಕಂಡುಬಂದ ಕಾರಣ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿರುತ್ತದೆ. ಈ ಪ್ರಕರಣದ  ಪಿರ್ಯಾದಿ ಮತ್ತು ಗಾಯಾಳು ಸಾಕ್ಷಿದಾರರು ತಮ್ಮ ಸಾಕ್ಷದಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ದವಾಗಿ ಸಾಕ್ಷ ನೀಡಿದ ಕಾರಣಗಳಿಂದ ಆರೋಪಿತರು ಮೇಲ್ಕಂಡ ಅಪಾದನೆಯನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ನಂಬಲಾರ್ಹವಾದ ಹಾಗೂ ಕಾನೂನು ಬದ್ದವಾದ ಸಾಕ್ಷ್ಯಾಧಾರಗಳಿಂದ ರುಜುವಾತುಪಡಿಸಲಾಗದ ಕಾರಣ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಅಂಶ ಸಂಖ್ಯೆ 1 ರಿಂದ 4 ನ್ನು ಈ ನ್ಯಾಯಾಲಯವು ನಕಾರಾತ್ಮಕವಾಗಿ  ಉತ್ತರಿಸುತ್ತದೆ.

14. ಅಂಶ ಸಂಖ್ಯೆ 5:- ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಆದೇಶವನ್ನು ಈ ನ್ಯಾಯಾಲಯವು ಮಾಡಿರುತ್ತದೆ.

**: ಆದೇಶ :**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಈ ನ್ಯಾಯಾಲಯವು ಚಲಾಯಿಸಿ ಆರೋಪಿತರ ವಿರುದ್ದ ಮಾಡಲಾದ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506  ಸಹವಾಚಕ ಕಲಂ 34 ರ ಅಡಿಯಲ್ಲಿ ಹೊರಿಸಲಾದ ಆರೋಪಗಳಿಂದ ಆರೋಪಿತ ರನ್ನು ದೋಷಮುಕ್ತಗೊಳಿಸಿ ನಿರ್ದೋಷಿತರೆಂದು ನಿರ್ಣಯಿಸಿ ಬಿಡುಗಡೆಗೆ ಆದೇಶಿಸಿಲಾಗಿರುತ್ತದೆ.**

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡುಗಳು ಮತ್ತು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮೇಲ್ಕನವಿ ಅವಧಿ ಮುಗಿದ ನಂತರ ಪಿಎಫ್ ನಂ.106ಃ2022 ರಲ್ಲಿ ನಮೂದಾಗಿರುವ ವಾಹನ ಬಿಡುಗಡೆ ಬಗ್ಗೆ ಈಗಾಗಲೇ ಆಗಿರುವ ಆದೇಶವನ್ನು ಖಾಯಂಗೊಳಿಸಲಾಗಿದೆ ಮತ್ತು ಪಿಎಫ್ ನಂ.104ಃ2022 ರಲ್ಲಿ ನಮೂದಾಗಿರುವ ವಸ್ತುಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

(ತೀರ್ಪನ್ನು ಉಕ್ತಲೇಖನದ ಮೇರೆಗೆ ಗಣಕಯಂತ್ರದ ಮೇಲೆ ನೇರವಾಗಿ ಶೀಘ್ರಲಿಪಿಗಾರರಿಂದ ಗಣಕೀಕರಿಸಿ ನಂತರ ಓದಿ, ತಿದ್ದಿ, ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 19ನೇ **ಏಪ್ರಿಲ್** 2025 ರಂದು ಪ್ರಕಟಿಸಲಾಯಿತು)

ಸಹಿ/-
(ರಹೀಂ ಅಲಿ ಎಂ. ನಧಾಫ್)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಕೆ.ಜಿ.ಎಫ್.

## ಃ ಅನುಬಂಧ ಃ

1. **ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳ ಪಟ್ಟಿ.**

ಫ್ರಾಸಾ-1 ಃ ಶ್ರೀ ಸುಬಾಷ್
ಫ್ರಾಸಾ-2 ಃ ಶ್ರೀ ಗೋವಿಂದ

2. **ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ.**

ನಿಪಿ 1 ಃ ಹೇಳಿಕೆ
ನಿಪಿ 1 ಎ ಃ ಸಹಿ
ನಿಪಿ 2 ಃ ಪಂಚನಾಮೆ
ನಿಪಿ 3 ಃ ಮರು ಹೇಳಿಕೆ
ನಿಪಿ 4 ಃ ಹೇಳಿಕೆ

3. **ಅಭಿಯೋಜನೆಯ ಪರ ಗುರುತಿಸಲಾದ ಮು.ಮಾ ಪಟ್ಟಿ.**

ಇಲ್ಲ

4. **ಆರೋಪಿತರ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳ ಪಟ್ಟಿ ಮತ್ತು ದಾಖಲೆಗಳು.**

ಇಲ್ಲ

ಸಹಿ/-
(ರಹೀಂ ಅಲಿ ಎಂ. ನಧಾಫ್)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಕೆ.ಜಿ.ಎಫ್.